ಅಸಲು ದಾವೆ ನಂಃ 190/2020 ಪಿ.ಡಬ್ಲ್ಯೂ2–ರುದ್ರಗೌಡ ಮುದಿಗೌಡ ಕ್ಯಾತನಗೌಡ್ರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 10/09/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ PKU ವಕೀಲರಿಂದಃ**

1. ನನಗೆ ಈಗ 63 ವರ್ಷ ವಯಸ್ಸು. ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನಗೆ ವಾದಿಯು ಬಹಳಷ್ಟು ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ವಾದಿಯವರ ಕೋರಿಕೆಯ ಮೇರೆಗೆ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಮ್ಮದು ಮುದೇನಗುಡಿಯಲ್ಲಿ ಮನೆ ಇರುತ್ತದೆ. ಸದರಿ ಮನೆಯ ಸಂಖ್ಯೆ ನನಗೆ ನೆನಪಿಲ್ಲ. ಪ್ರಸ್ತುತ ದಾವೆಯನ್ನು ವಾದಿಯವರು ಜಾಗ ನಮ್ಮದು ಎಂದು ಹಾಕಿರುತ್ತಾರೆ. ಅವರ ಹೆಸರು ಕಂಡಕ್ಟರ್ ಎಂದು ಕರೆಯುತ್ತೇವೆ, ಅವರ ಹೆಸರು ನನಗೆ ನೆನಪಿಲ್ಲ. ದಾವಾ ಆಸ್ತಿಯ ಸರ್ವೇ ನಂಬರ 253/1 ಆಗಿರುತ್ತದೆ. ನಾನು ಸರ್ವೇ ನಂಬರ 253/1 ಎಂದು ನನ್ನ ಎಡಗೈಯಲ್ಲಿ ಬರೆದುಕೊಂಡು ಬಂದಿರುತ್ತೇನೆಂದರೆ ಸರಿ. ನಮ್ಮ ಮನೆಯ ಸಂಖ್ಯೆ ನನಗೆ ಗೊತ್ತಿಲ್ಲ, ಆದರೂ ಸಹ ದಾವಾ ಆಸ್ತಿಯ ಸರ್ವೇ ನಂಬರನ್ನು ವಾದಿಯವರು ಹೇಳಿದ ಹಾಗೇ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೇ ನಂಬರ 253/1 ಕ್ಷೇತ್ರ 20 ಎಕರೆ ಇರುತ್ತದೆ. ಸಾಕ್ಷಿಯು ಮುಂದುವರೆದು 20 ಗುಂಟೆ ಇರುತ್ತದೆ. ಎಂದು ನುಡಿದಿರುತ್ತಾರೆ. ನಾನು ದಾವಾ ಆಸ್ತಿಯ ಉತಾರವನ್ನು ನೋಡಿರುವುದಿಲ್ಲ. ಸರ್ವೇ ನಂಬರ 253/1 ಆಸ್ತಿಯು ಪ್ರತಿವಾದಿಯವರಿಗೆ ಸೇರಿದ ಆಸ್ತಿ ಎಂದರೆ ಸರಿ. ಸರ್ವೇ ನಂಬರ 253/1 ಆಸ್ತಿಯ ಬಗ್ಗೆ ಪ್ರತಿವಾದಿಯವರು ವಾದಿಯವರಿಗೆ ಯಾವುದೇ ಕಾಗದ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 01/03/2001 ಕ್ಕೆ ಪ್ರತಿವಾದಿಯವರು ವಾದಿಯವರಿಗೆ 20 ಗುಂಟೆ ಆಸ್ತಿಯ ಬಗ್ಗೆ ಕಾಗದ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿಯವರು ಸ್ಟ್ಯಾಂಪ್ ಕಾಗದದಲ್ಲಿ ಬರೆದುಕೊಟ್ಟಿರುತ್ತಾರೆ. ಅದು ಯಾವ ಕಾಗದ ಎಂದು ನನಗೆ ಹೇಳಲು ಬರುವುದಿಲ್ಲ. ಸ್ಟ್ಯಾಂಪ್ ಪೇಪರ್ ನ್ನು ಕಂಡಕ್ಟರರವರು ತಂದಿರುತ್ತಾರೆ. ಕಂಡಕ್ಟರ ರವರು ರೂ.20/-ಸ್ಟ್ಯಾಂಪ್ ಪೇಪರ್ ನ್ನು ದಿನಾಂಕ 01/03/2008 ರಂದು ರೋಣದಿಂದ ತೆಗೆದುಕೊಂಡು ಬಂದಿರುತ್ತಾರೆ. ಪ್ರತಿವಾದಿಯವರು ಕಾಗದ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ವಾದಿಯವರ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ- 1 ರಲ್ಲಿ ಇರುವ ಹೆಬ್ಬೆಟ್ಟಿನ ಗುರುತು 1 ನೇ ಪ್ರತಿವಾದಿಯವರದ್ದು ಅಲ್ಲ ಮತ್ತು ಇನ್ನೊಂದು ಸಹಿ ಪ್ರತಿವಾದಿ ನಂಬರ 3 ರದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಗೋಳಸಂಗಿ ರವರು ದಿನಾಂಕ 01/03/2008 ರಂದು ಬರೆದಿರುತ್ತಾರೆ. ಸಾಕ್ಷಿಯು ಸದರಿ ದಿನಾಂಕವನ್ನು ತನ್ನ ಎಡಗೈಯ ಮೇಲೆ ಬರೆದುಕೊಂಡಿರುವುದನ್ನು ನೋಡಿಕೊಂಡು ಹೇಳಿರುತ್ತಾರೆ. **ಸಾಕ್ಷಿಗೆ ಎರಡು ಬಾರಿ ಕೈಯಲ್ಲಿ ಬರೆದುಕೊಂಡು ಬಂದು ಹೇಳಬಾರದು ಮತ್ತು ಈಗಾಗಲೇ ಬರೆದುಕೊಂಡಿರುವುದನ್ನು ನೋಡಿಕೊಂಡು ಹೇಳಬಾರದು ಎಂದು ಹೇಳಿದರೂ ಸಹ ಸಾಕ್ಷಿಯು ದಿನಾಂಕ ಮತ್ತು ಸರ್ವೇ ನಂಬರನ್ನು ನೋಡಿಕೊಂಡು ಹೇಳಿರುತ್ತಾರೆ.** ಪ್ರತಿವಾದಿಯವರು ಯಾವುದೇ ಕಾಗದ

ಪತ್ರವನ್ನು ಬರೆದುಕೊಡದೇ ಇದ್ದರೂ ಸಹ ವಾದಿಯವರ ಮಾತನ್ನು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.